ಶ್ರೀ ಎಸ್. ಸಿದ್ದರಾಮಯ್ಯ.—ಈ ಡಿವಿಜನ್‌ಗಳಾಗಿ ವಿಭಾಗಿಸುವ ಯೋಜನೆ ಬಗ್ಗೆ ಪರಿಣತರ ಸಮಿತಿಯನ್ನು ರಚನೆ ಮಾಡಿದ್ದು ನಿಜ. ಅವರು ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ ಎಂದು ಉತ್ತರದಲ್ಲಿಯೂ ತಿಳಿಸಿದ್ದೇನೆ. ಆ ಸಮಿತಿಯು ೧೧-೭-೧೯೮೮ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಆ ವರದಿಯಲ್ಲಿ ರಾಜ್ಯ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಳಿ-ಖಿ ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡಬೇಕೆಂದು ಶಿಫಾರಸ್ಸು ಇದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಕೂಡ ಸಾರಿಗೆ ವ್ಯವಸ್ಥೆಗೆ ಒಂದು ಸಂಸ್ಥೆಯು ಇದೆ. ಅಲ್ಲಿ ಅವರು ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ನೋಡಬೇಕಾಗುತ್ತದೆ. ತಮಿಳುನಾಡಿನಲ್ಲಿಯೂ ಕೂಡ ವಿಭಾಗ ಸಂಸ್ಥೆಗಳು ಇವೆ. ಅಲ್ಲಿನ ವ್ಯವಸ್ಥೆಯನ್ನು ಪರಿಶೀಲನೆ ಮಾಡಿ, ಅದರಿಂದ ಎಷ್ಟು ಲಾಭ-ನಷ್ಟ ಆಗುತ್ತಿದೆ ಮತ್ತು ಸಾರ್ವಜನಿಕರಿಗೆ ಇಂತಹ ವ್ಯವಸ್ಥೆಯಿಂದಾಗಿ ಎಷ್ಟರಮಟ್ಟಿಗೆ ಅನುಕೂಲ ಆಗುತ್ತಿದೆ ಎಂಬುದನ್ನು ನೋಡಬೇಕಲ್ಲದೆ, ಸಂಸ್ಥೆಯಲ್ಲಿ ದಕ್ಷತೆ ಎಷ್ಟರಮಟ್ಟಿಗೆ ಹೆಚ್ಚಿಗೆ ಆಗುತ್ತಿದೆ ಎಂಬ ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ವಿಚಾರ ಮಾಡಿ ಆ ಮೇಲೆ ಈ ಬಗ್ಗೆ ನಿರ್ಣಯವನ್ನು ಮಾಡಬೇಕಾಗುತ್ತದೆ

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೇ, ನಾನೊಂದು ಸಲಹೆಯನ್ನು ಮಾತ್ರ ಕೊಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಉಮರಬ್ಬನವರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ನನ್ನ ಪ್ರಶ್ನೆ ಇವೆ ಮತ್ತು ಹಲವಾರು ಪ್ರಶ್ನೆಗಳು ಇನ್ನೂ ಬಾಕಿ ಇವೆ. ನನಗೆ ಅವಕಾಶ ಕೊಡಿ.

ಅಧ್ಯಕ್ಷರು. ಯಾರು ಪ್ರಶ್ನೆ ಹಾಕಿದ್ದಾರೋ ಅವರು ಮಾತ್ರ ಪ್ರಶ್ನೆ ಕೇಳಬೇಕು. ಈಗಾಗಲೇ ಪ್ರಶ್ನೋತ್ತರ ವೇಳೆ ಮುಗಿದಿದೆ, ಆದರೂ ತಪ್ಪಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಮುಂದಿನ ಪ್ರಶ್ನೆ ಮಾನ್ಯ ಗೋಪಾಲ ಮುಕುಂದ ಕಾನಡೆಯವರು ಕೇಳಿ.....

ಕರ್ನಾಟಕ ರೇಷ್ಮೆ ಮಾರಾಟ ಮಂಡಲಿಯ ಉತ್ಪಾದನ ಬಗ್ಗೆ

೨೯೫೩. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಲಾಭದಲ್ಲಿದೆಯೇ ಆರ್ಥಿಕ ನಷ್ಟದಲ್ಲಿ ನಡೆಯುತ್ತಿದೆಯೇ ?

ಆ) ಈ ರೇಷ್ಮೆ ಮಂಡಳಿಯು ರೈತರಿಗೆ ರೇಷ್ಮೆ ಬಗ್ಗೆ ಸಾಲ ಕೊಡುತ್ತಿರುವುದು ನಿಜವೇ ?

ಇ) ಸದರಿ ಸಾಲ ಪಡೆದುಕೊಂಡವರಿಂದ ರೇಷ್ಮೆ ಮಂಡಳಿಗೆ ಬಾಕಿ ಬರಬೇಕಾದ ಹಣದ ಮೊತ್ತವೆಷ್ಟು ?

ಈ) ಹಾಗಿದ್ದಲ್ಲಿ, ಇದುವರೆವಿಗೂ ಈ ಬಾಕಿ ವಸೂಲು ಮಾಡದೇ ಇರಲು ಕಾರಣವೇನು ಹಾಗೂ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಉ) ಈ ರೇಷ್ಮೆ ಮಂಡಳಿಯಲ್ಲಿ ಎಷ್ಟು ಜನ ನೌಕರರಿದ್ದಾರೆ ?

ಊ) ಈ ನೌಕರರಲ್ಲಿ ಎಷ್ಟು ಮಂದಿ ಹರಿಜನ ಅಧಿಕಾರಿಗಳಿದ್ದಾರೆ ?

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನ ಸಚಿವರು).—

ಅ) ಲಾಭದಲ್ಲಿ ನಡೆಯುತ್ತಿದೆ.

ಆ) ರೈತರಿಗೆ ಸಾಲ ನೀಡುತ್ತಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಮಂಡಳಿಯಲ್ಲಿ ೧೪೮ ಮಂದಿ ಕ್ರಮಬದ್ಧ ಸೇವೆಯಲ್ಲಿಯೂ, ೧೦ ಮಂದಿ ದಿನಗೂಲಿ ೧೯ ಮಂದಿ ನಿಗದಿತ ವೇತನದಲ್ಲಿಯೂ ಮತ್ತು ೬ ಮಂದಿ ನಿಯೋಜನೆ ಮೇರೆಗೂ ಇರುತ್ತಾರೆ.

ಊ) ೧೪೮ ಮಂದಿಯಲ್ಲಿ ಮೂವರು ಹರಿಜನ ಅಧಿಕಾರಿಗಳೂ ಸೇರಿದಂತೆ ಒಟ್ಟು ೨೬ ಮಂದಿ ಇರುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಲಾಭದಲ್ಲಿ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಯಾವ ಯಾವ ಇಸವಿಯಿಂದ ಲಾಭದಲ್ಲಿ ನಡೆಯುತ್ತದೆಂದು ತಿಳಿಸುತ್ತೀರಾ ? ಮಂಡಳಿಯಿಂದ ಸಾಲ ತೆಗೆದುಕೊಂಡವರಿಂದ ಬರಬೇಕಾದ ಮೊತ್ತ ಎಷ್ಟು ಅಂದರೆ ಅದಕ್ಕೆ ಉದ್ಭವಿಸುವುದಿಲ್ಲ ಎಂದು ಉತ್ತರಿಸಿದ್ದಾರೆ. ಹೀಗೆ ಹಿಂದೆ ಕೊಟ್ಟ ಸಾಲವನ್ನು ವಸೂಲು ಮಾಡಲಿಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಹಾಗೆಯೇ ಮೈಸೂರ್‌ನಲ್ಲಿ ಬಿಲ್ಡಿಂಗ್ ರಿಪೇರಿ ಮಾಡುವುದಕ್ಕೆ ೮ ಲಕ್ಷ ರೂಪಾಯಿಗಳ ವೆಚ್ಚವನ್ನು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆ ಕೆಲಸವನ್ನು ಯಾರಿಗೆ ಕೊಟ್ಟಿದ್ದಾರೆ ? ಅಲ್ಲಿಯ ನೌಕರರ ವರ್ಗದ ಸಂಬಂಧಿಕರಿಗೆ ಆ ಕೆಲಸವನ್ನು ಪಹಿಸಿಕೊಡಲು ಸರ್ಕಾರ ಏನಾದರೂ ಆದೇಶವನ್ನು ಕೊಟ್ಟಿದೆಯೇ ? ಹೀಗೆ ಸಂಬಂಧಿಕರಿಗೆ ಕೊಟ್ಟರು ವುದನ್ನು ರೆಜುಂವಾತು ಮಾಡಿದರೆ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೃಷ್ಣ.—ಅಧ್ಯಕ್ಷರೇ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ೬೮೯,೦೦೦ ರೂ. ಗಳನ್ನು ಲಾಭ ಗಳಿಸಿತ್ತು. ರೈತರಿಗೆ ಸಾಲವನ್ನು ಈ ಸಂಸ್ಥೆಯಿಂದ ಕೊಡುತ್ತಾ ಇಲ್ಲ. ಆದರೆ ರೇಷ್ಮೆ ಹುರಿಗಾರರಿಗೆ, ನೇಯ್ಗೆಯವರಿಗೆ ಈ ಸಂಸ್ಥೆ ಸಾಲವನ್ನು ಕೊಡುತ್ತಾ ಇದೆ, ಇನ್ನುಳಿದ ಪ್ರಶ್ನೆಗಳಿಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೊಟ್ಟರೆ ಅದಕ್ಕೆ ಉತ್ತರವನ್ನು ಕೊಡಬಹುದು. ಆ ಪ್ರಶ್ನೆ ಗಳಿಗೆ ಸಂಬಂಧಪಟ್ಟಂತೆ ಈಗ ನಮ್ಮಲ್ಲಿ ಉತ್ತರ ಇಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಕ್ಕಿಲ್ಲ.....

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಹೆಚ್ಚಿಗೆ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ.

ಶ್ರೀ ಪಟವರ್ಧಕ್ ರತ್ನಾಕರ್.—ಅಧ್ಯಕ್ಷರೇ ನೀವು ಸದಸ್ಯರ ಹಕ್ಕನ್ನು ಮೊಟಕು ಮಾಡುತ್ತಿದ್ದೀರಿ.....

ಶ್ರೀ ಗೋಪಾಲ ಮುಕುಂದ ಕಾನಡೆ.—ನನಗೆ ಸರಿಯಾದ ಉತ್ತರವನ್ನು ದೊರಕಿಸಿಕೊಡಬೇಕು. ನಾನು ಮಾಡಿದ ಆಪಾದನೆಗೆ ಸಂಬಂಧಪಟ್ಟಂತೆ ನನ್ನಲ್ಲಿ ರುಜುವಾತುಗಳು ಇವೆ. ಹೀಗೆ ನಾವು ಹೇಳಿದ್ದನ್ನು ತಾವುಗಳು ಕೇಳುವುದಿಲ್ಲ ಅಂದರೆ ತಪ್ಪಿತಸ್ಥ ಅಧಿಕಾರಿಗಳಿಗೆ ನೀವು ರಕ್ಷಣೆ ಕೊಡುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಆದ್ದರಿಂದ ನನಗೆ ಅವಕಾಶ ಕೊಡಿ...

ಶ್ರೀ ಕೃಷ್ಣ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನಾನು ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಇಲಾಖೆಯಲ್ಲಿ ಯಾರೇ ತಪ್ಪಿತಸ್ಥ ಅಧಿಕಾರಿಗಳಿಗೆ ರಕ್ಷಣೆ ಕೊಡುವ ಪ್ರಶ್ನೆಯೇ ಇಲ್ಲ. ಯಾರಿಗೂ ನಾವು ರಕ್ಷಣೆ ಕೊಡುತ್ತಾ ಇಲ್ಲ. ಒಂದು ವೇಳೆ ಮಾನ್ಯ ಸದಸ್ಯರು ಇಲಾಖೆಯಲ್ಲಿನ ಯಾವುದೇ ಅಧಿಕಾರಿಯ ವಿರುದ್ಧ ಸೂಕ್ತ ದೂರನ್ನು ಕೊಟ್ಟರೆ, ಅದನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ.....

ಅಧ್ಯಕ್ಷರು.—ತಪ್ಪಿತಸ್ಥ ಅಧಿಕಾರಿಗಳಲ್ಲಿ ಯಾರಿಗಾದರೂ ರಕ್ಷಣೆ ಕೊಟ್ಟಿದ್ದರೆ ಹೇಳಿ. ಈಗ ತಪ್ಪು ಪ್ರಶ್ನೆಯನ್ನು ಮುಗಿಸಿ, ಪ್ರಶ್ನೋತ್ತರ ವೇಳೆ ಮುಗಿದಿದ್ದರೂ ಸೀಮಿತ ಅವಕಾಶವನ್ನು ಕೊಡುತ್ತೇನೆಂದು ನಾನು ಮೊದಲೇ ಹೇಳಿದ್ದೇನೆ. ಇನ್ನೂ ೧೪ ಪ್ರಶ್ನೆಗಳು ಬಾಕಿ ಇವೆ. ಅವುಗಳು ಮುಗಿಯುವುದು ಬೇಡವೇ ?

ಶ್ರೀ ಪಟವರ್ಧಕ್ ರತ್ನಾಕರ್.—ನಾವು ಪ್ರಶ್ನೆಗಳನ್ನು ಕೇಳಬೇಕೇ ಬೇಡವೇ ಎಂದು ಹೇಳಿ ?

(ಗೊಂದಲ)

ಅಧ್ಯಕ್ಷರು.—ಹೀಗೆ ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ನೀವುಗಳು ಈ ರೀತಿಯಾಗಿ ಕಾರ್ಯಕಲಾಪ ನಡೆಯುವಾಗ ಇಂಟರ್‌ಫಿಯರ್ ಮಾಡಿದರೆ ಅನಿವಾರ್ಯವಾಗಿ ಸೂಕ್ತ ಕ್ರಮವನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನನ್ನ ಹತ್ತಿರ ಸಂಬಂಧಪಟ್ಟ ವಿಷಯದ ಬಗ್ಗೆ ವಿವರಗಳು ಇವೆ. ದಯವಿಟ್ಟು ತನಿಖೆ ಮಾಡಿಸಿ.....

ಅಧ್ಯಕ್ಷರು.—ಅದನ್ನು ನೀವು ಅರ್ಧಘಂಟೆ ಕಾಲಾವಧಿಯ ಚರ್ಚೆಗೆ ಕಳುಹಿಸಿಕೊಡಿ. ಅವಕಾಶ ಮಾಡಿಕೊಡುತ್ತೇನೆ.

ರಾಜ್ಯದಲ್ಲಿ ಅಂಗನವಾಡಿ ಶಿಶು ವಿಹಾರಗಳನ್ನು ಪ್ರಾರಂಭಿಸುವ ಬಗ್ಗೆ

೨೯೭೧ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ತಾಲ್ಲೂಕಿನಲ್ಲಿ ಅಂಗನವಾಡಿ ಶಿಶು ವಿಹಾರಗಳನ್ನು ಪ್ರಾರಂಭಿಸಲಾಗಿದೆ?

ಆ) ತರೀಕೆರೆ ತಾಲ್ಲೂಕಿನಲ್ಲಿ ಅಂಗನವಾಡಿ ಶಿಶು ವಿಹಾರಗಳನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಂಡಿರುವರೆ?

ಇ) ಯಾವ ಆಧಾರಗಳ ಮೇಲೆ ಅಂಗನವಾಡಿ ಶಿಶು ವಿಹಾರಗಳನ್ನು ಪ್ರಾರಂಭಿಸಲಾಗಿದೆ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

ಅ) ೮೮ ತಾಲ್ಲೂಕುಗಳಲ್ಲಿ ಪ್ರಾರಂಭಿಸಲಾಗಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಈ ಕೆಳಕಂಡ ಆಧಾರಗಳ ಮೇಲೆ ಪ್ರಾರಂಭಿಸಲಾಗುತ್ತಿದೆ.-

೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಸಂಖ್ಯೆ ಶೇ ೨೦೦೦ ಕ್ಕಿಂತ ಅಧಿಕವಿರುವ ಪ್ರದೇಶಗಳಲ್ಲಿ.

೨) ಕ್ಷಾಮ ಪೀಡಿತ ಪ್ರದೇಶ (ಡಿ.ಪಿ.ಪಿ.)

೩) ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಪ್ರದೇಶ (ಐ.ಟಿ.ಡಿ.ಪಿ.)

೪) ಪರಿಶಿಷ್ಟ ಜಾತಿಗೆ ಮೀಸಲಾದ ವಿಧಾನಸಭಾ ಕ್ಷೇತ್ರವನ್ನಿರುವ ತಾಲ್ಲೂಕು ಹಾಗೂ ಹಿಂದುಳಿದ ವರ್ಗಗಳಿರುವ ತಾಲ್ಲೂಕುಗಳಿಗೆ ಆದ್ಯತೆಯ ಮೇಲೆ ನೀಡಲಾಗುತ್ತಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ರಾಜ್ಯದಲ್ಲಿ ೮೮ ತಾಲ್ಲೂಕುಗಳಲ್ಲಿ ಅಂಗನವಾಡಿ ಶಿಶುವಿಹಾರಗಳನ್ನು ತೆರೆದು ಸ್ವಾಗತಾರ್ಹ ಕಾರ್ಯಕ್ರಮವನ್ನು ಮಾಡಿದ್ದೀರಿ ನಮ್ಮ ಕ್ಷೇತ್ರದಲ್ಲಿ ಅಂಗನವಾಡಿ ಶಿಶು ವಿಹಾರವನ್ನು ತೆರೆಯುವ ಬಗ್ಗೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ ಹೀಗೆ ಅಂಗನವಾಡಿಗಳನ್ನು ತೆರೆಯುವಾಗ ಕೇಂದ್ರ ಸರಕಾರದ ಗೈಡ್‌ಲೈನ್ಸ್‌ಗೆ ಅನುಸಾರವಾಗಿ ತೆರೆಯುತ್ತೀರಾ? ಹಾಗೆಯೇ ಸ್ಪೆಷಲ್ ನ್ಯೂಟ್ರೀಷನ್ ಪ್ರೋಗ್ರಾಂ ಅನ್ನು ನಮ್ಮ ತಾಲ್ಲೂಕಿನಲ್ಲಿ ತೆಗೆದುಕೊಳ್ಳುತ್ತೀರಾ ಎಂಬ ಬಗ್ಗೆ ಕೂಡ ಮಾನ್ಯ ಸಚಿವರು ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಈ ಯೋಜನೆ ವಿಸ್ತಾರವಾಗಿದೆ ಇದರಲ್ಲಿ ಮೂರನೇ ಒಂದರಷ್ಟು ಭಾಗವನ್ನು ಕೇಂದ್ರ ಸರಕಾರ ನೀಡುತ್ತದೆ. ಉಳಿದ ಎರಡು ಭಾಗವನ್ನು ರಾಜ್ಯ ಸರಕಾರ ಕೊಡಬೇಕಾಗುತ್ತದೆ. ೧೯೮೮-೮೯ನೇ ಸಾಲಿನಲ್ಲಿ ೧೪ ಹೊಸ ಯೋಜನೆಗಳನ್ನು ಮಂಜೂರು ಮಾಡುತ್ತೇವೆಂದು ಕೇಂದ್ರ ಸರಕಾರದವರು ಒಪ್ಪಿದ್ದರಿಂದ ಅವರ ಗೈಡ್‌ಲೈನ್ಸ್ ಪ್ರಕಾರ ೧೪